C.C. No.- 2083/2023
CW-1 / PW-1

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ.ಗಳ ನ್ಯಾಯಾಲಯ, ಕಾರಟಗಿ (ಸಂಚಾರಿ ನ್ಯಾಯಾಲಯ) ಕಾರಟಗಿ.**

**ಸಾಕ್ಷಿಯನ್ನು ದಿನಾಂಕ- 22.07.2025 ರಂದು ಕರೆಯಿಸಿ ಪ್ರಾಮಾಣೀಕರಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು- | ಸಿದ್ದರಾಮಯ್ಯ |
| ತಂದೆ / ಗಂಡನ ಹೆಸರು- | ಬಸಯ್ಯ |
| ವಯಸ್ಸು- | 46 ವರ್ಷಗಳು |
| ಉದ್ಯೋಗ- | ಪಿ ಐ, ಜಗಳೂರು ಪೊಲೀಸ ಠಾಣೆ |
| ವಾಸಸ್ಥಳ- | ಜಗಳೂರು |

**ಮುಖ್ಯ ವಿಚಾರಣೆ- ಸ. ಸ. ಅ. ಅವರಿಂದ-**

ನಾನು ದಿಃ **28.11.2022** ರಿಂದ **13.02.2024** ಸಾಲಿನವರೆಗೆ ಕಾರಟಗಿ ಪೋಲಿಸ್ ಠಾಣೆಯಲ್ಲಿ ಪಿ ಐ ಎಂದು ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ದಿಃ 10.05.2023 ರಂದು 2023ನೇ ಸಾಲಿನ ವಿಧಾನ ಸಭೆ ಚುನಾವಣೆ ನಿಮಿತ್ಯ ಪೆಟ್ರೋಲಿಂಗ್ ಕರ್ತವ್ಯದಲ್ಲಿದ್ದಾಗ ಮತಗಟ್ಟೆಗಳಿಗೆ ಭೇಟಿ ನೀಡಿ ಯಾವುದೇ ರೀತಿ ಕಾನೂನು ಸುವ್ಯವಸ್ಥೆಗೆ ಧಕ್ಕೆ ಆಗದಂತೆ ನೋಡಿಕೊಳ್ಳಲು ಕಾರಟಗಿ ಪಟ್ಟಣದಲ್ಲಿ ಭೂತ್ ಚೆಕ್ ಮಾಡುತ್ತಾ ನವಲಿ ವೃತ್ತದ ಹತ್ತಿರ ಬರುತ್ತಿರುವಾಗ ನಜೀರ ಕಾಲೋನಿಯ ಒಂದು ಕಪಾಟಿನಲ್ಲಿ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾನೆ ಎಂದು ಖಚಿತ ಮಾಹಿತಿ ಬಂದ ಮೇರೆಗೆ, ಈ ವಿಚಾರವನ್ನು ನಾನು ಚಾಸಾ-4 ರಿಂದ 6 ರವರಿಗೆ ತಿಳಿಸಿ ನಮ್ಮ ಸರಕಾರಿ ಜೀಪಿನಲ್ಲಿ ನಜೀರ ಕಾಲೋನಿ ಹತ್ತಿರ ಹೋಗಿ ಅಲ್ಲಿ ಚಾಸಾ-4 ರವರ ಮುಖಾಂತರ ಚಾಸಾ-2 ಮತ್ತು 3 ರವರನ್ನು ಪಂಚರನ್ನಾಗಿ ಕರೆಸಿಕೊಂಡು, ಅವರಿಗೆ ವಿಚಾರ ತಿಳಿಸಿ ಅವರು ಪಂಚರಾಗಲು ಒಪ್ಪಿಕೊಂಡಿರುತ್ತಾರೆ. ನಂತರ ನಮ್ಮ ವಾಹನವನ್ನು ಅಲ್ಲೇ ಬಿಟ್ಟು ನಜೀರ ಕಾಲೋನಿಯ ಒಂದು ಮನೆಯ ಮರೆಯಲ್ಲಿ ನಿಂತು ನೋಡಲಾಗಿ ಒಬ್ಬ ವ್ಯಕ್ತಿ ಮಧ್ಯ ಮಾರಾಟ ಮಾಡುತ್ತಿದ್ದುದ್ದನ್ನು ಖಚಿತಪಡಿಸಿಕೊಂಡು ದಾಳಿ ಮಾಡಿದಾಗ, ಒಬ್ಬ ವ್ಯಕ್ತಿ ಸಿಕ್ಕಿಬಿದ್ದರು. ಆತನ ಹೆಸರನ್ನು ವಿಚಾರಿಸಲಾಗಿ ಆತನ ಹೆಸರು ಹನುಮೇಶ ಸಾಃ ಕಾರಟಗಿ ಎಂದು ತಿಳಿಸಿದನು. ಆತನಿಗೆ ಮಧ್ಯದ ಬಗ್ಗೆ ವಿಚಾರಿಸಿದಾಗ ಯಾವುದೇ

ಅನುಮತಿ ಪಡೆದುಕೊಳ್ಳದೇ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ತಿಳಿದುಬಂತು. ನಂತರ ಪಂಚರ ಸಮಕ್ಷಮ ಪರಿಶೀಲಿಸಲಾಗಿ 90 ಎಮ್.ಎಲ್ ಅಳತೆಯ ಒಟ್ಟು 90 ಒಸಿ ವಿಸ್ಕಿ ಟೆಟ್ರಾಪಾಕೇಟುಗಳು ದೊರೆತಿದ್ದು, ಅವುಗಳನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡು, ಮದ್ಯವನ್ನು ರಾಸಾಯನಿಕ ಪರೀಕ್ಷಾ ಕೇಂದ್ರಕ್ಕೆ ಕಳುಹಿಸುವ ಸಲುವಾಗಿ ಒಂದು ರಟ್ಟಿನ ಬಾಕ್ಸನಲ್ಲಿ ಬಟ್ಟೆಯನ್ನು ಸುತ್ತಿ ಅದಕ್ಕೆ ಪಂಚರ ಸಹಿ ಇರುವ ಚೀಟಿಯನ್ನು ಅಂಟಿಸಿ ಎನ್ ಎಂಬ ಅಕ್ಷರದಿಂದ ಸೀಲ್ ಮಾಡಿದ್ದು, ಜಪ್ತಿ ಪಂಚನಾಮೆಯನ್ನು ರಾತ್ರಿ 8.05 ರಿಂದ 9.05 ರವರೆಗೆ ಚಾಸಾ-4 ರವರ ಸಹಾಯದಿಂದ ಲ್ಯಾಪ್ ಟಾಪ್ ನಲ್ಲಿ ಪಂಚನಾಮೆಯನ್ನು ತಯಾರಿಸಿ, ನಂತರ ಠಾಣೆಗೆ ಬಂದು ಜಪ್ತಿ ಪಂಚನಾಮೆಯನ್ನು ಪ್ರಿಂಟ್ ತೆಗೆಸಿ ಪಂಚರ ಸಹಿ ತೆಗೆದುಕೊಂಡಿರುತ್ತೇವೆ. ನಂತರ ಆರೋಪಿಯ ವಿರುದ್ದ ಮುಂದಿನ ಕ್ರಮಕ್ಕಾಗಿ ವರದಿ ದೂರನ್ನು, ಪಂಚನಾಮೆ ಮತ್ತು ಮಾಲುಗಳನ್ನು ಚಾಸಾ-8 ರವರಿಗೆ ನೀಡಿರುತ್ತೇನೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಫಿರ್ಯಾದಿಯನ್ನು ನೋಡಿ ಗುರುತಿಸುತ್ತಾರೆ. ಅದನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ರಾಸಾಯನಿಕ ಪರೀಕ್ಷೆಗೆ ಒಳಪಟ್ಟು ವಾಪಸ್ಸು ಬಂದಿರುವ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿದ್ದು, ಅದನ್ನು ಒಟ್ಟಾಗಿ ಮು.ಮಾ-1 ಎಂದು ಗುರುತಿಸಲಾಯಿತು. ಆರೋಪಿಯು ಗೈರುಹಾಜರಿದ್ದು, ಆರೋಪಿಯ ಪರ ವಕೀಲರು ಆರೋಪಿಯ ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ. ಸಾಕ್ಷಿಯು ಆರೋಪಿಯನ್ನು ನೋಡಿದರೆ ಗುರುತಿಸುವೆನು ಎಂದು ನುಡಿಯುತ್ತಾರೆ.

**<u>ಪಾಟೀಸವಾಲು- ಶ್ರೀ ಬಿ ಬಿ ಎ ಆರೋಪಿ ಪರ ವಕೀಲರಿಂದ</u>**-

3. ಘಟನೆ ನಡೆದ ದಿನ ನಾವು ಕಾರಟಗಿಯಲ್ಲಿ ಪೆಟ್ರೋಲಿಂಗ್ ಕರ್ತವ್ಯದಲ್ಲಿ ಇದ್ದೆವು. ಯಾವ ವಾರ್ಡಿನಿಂದ ಪೆಟ್ರೋಲಿಂಗ್ ಕರ್ತವ್ಯ ಪ್ರಾರಂಭಿಸಿದೆವು ಎಂದರೆ ನನಗೆ ನೆನಪಿಲ್ಲ. ನಾವು ನವಲಿ ವೃತ್ತದ ಬಳಿ ಇದ್ದಾಗ ಸುಮಾರು ಸಂಜೆ 5.30 ಗಂಟೆಗೆ ನಮಗೆ ಮಾಹಿತಿ ಬಂದಿತ್ತು. ನಮಗೆ ಮಾಹಿತಿ ಬಂದಾಗ ಸಂಜೆ 6-30 ಗಂಟೆ ಆಗಿತ್ತು.

ಈ ವಿಷಯವನ್ನು ದೂರಿನಲ್ಲಿ ನಮೂದಿಸಿಲ್ಲ. ನಾವು ನವಲಿ ವೃತ್ತಕ್ಕೆ ಹೋದಾಗ 8.05 ಗಂಟೆ ಆಗಿತ್ತು ಎಂದು ದೂರಿನಲ್ಲಿ ನಮೂದಿಸಿರುತ್ತೇನೆ ಎಂದರೆ ನಿಜ. ನಮ್ಮ ಠಾಣೆಯಿಂದ ನಜೀರ ಕಾಲೋನಿ ಹತ್ತಿರದಲ್ಲಿದೆ ಎಂದರೆ ನಿಜ. ಬಾತ್ಮಿ ಬಂದ ತಕ್ಷಣ ಘಟನಾ ಸ್ದಳಕ್ಕೆ ಚುನಾವಣಾ ಸಂಬಂಧ ಹೋಗಲು ಆಗಲಿಲ್ಲ. ದೂರಿನಲ್ಲಿ 8.05 ಗಂಟೆಗೆ ನಮಗೆ ಮಾಹಿತಿ ಬಂದಿದ್ದು ಅದೇ ಸಮಯದಿಂದ ಪಂಚನಾಮೆ ಮಾಡಿದ್ದೇವೆ ಎಂದು ನಮೂದಿದೆ ಎಂದರೆ ಸಾಕ್ಷಿಯು ಕಣ್ಣುತಪ್ಪಿನಿಂದ 8.05 ನಮೂದಾಗಿದೆ ಎಂದು ನುಡಿಯುತ್ತಾರೆ. ದೂರಿನಲ್ಲಿ ತಿಳಿಸಿದಂತೆ ಕಪಾಟಿಗೆ ಬಾಗಿಲುಗಳಿದ್ದವು ಎಂದರೆ ನಿಜ. ದಾಳಿ ಮಾಡಬೇಕಾದರೆ ನ್ಯಾಯಾಲಯದಿಂದ ಅನುಮತಿ ಪಡೆಯಬೇಕೆಂದರೆ ಸಾಕ್ಷಿಯು ಸದರಿ ಕಪಾಟು ಸಾರ್ವಜನಿಕ ಸ್ದಳದಲ್ಲಿದ್ದ ಕಾರಣ ನಾವು ದಾಳಿ ಮಾಡಿದೆವು ಎಂದು ನುಡಿಯುತ್ತಾರೆ. ಸಾರ್ವಜನಿಕ ಸ್ದಳದಲ್ಲಿ ದಾಳಿ ಮಾಡಬೇಕಾದರೆ ನ್ಯಾಯಾಲಯದಿಂದ ಅನುಮತಿ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ ಎಂದರೆ ಸರಿ. ಸಾರ್ವಜನಿಕ ಸ್ದಳದಲ್ಲಿ ದಾಳಿ ಮಾಡಬೇಕಾದರೆ ನ್ಯಾಯಾಲಯದಿಂದ ಅನುಮತಿ ಪಡೆದುಕೊಳ್ಳುವ ಅವಶ್ಯಕತೆ ಇರುತ್ತದೆ ಎಂದರೆ ಸರಿಯಲ್ಲ.

4. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ, ಪಂಚರ ಸಮಕ್ಷಮ ಯಾವುದೇ ದಾಳಿಯನ್ನು ಮಾಡಿಲ್ಲ, ಆರೋಪಿ ಕಡೆಯಿಂದ ಯಾವುದೇ ಮುದ್ದೆ ಮಾಲುಗಳನ್ನು ವಶಪಡಿಸಿಕೊಂಡಿಲ್ಲ, ಆರೋಪಿಗೂ ಮತ್ತು ಮು.ಮಾ-1 ಕ್ಕೂ ಯಾವುದೇ ಸಂಬಂಧ ಇಲ್ಲ, ಠಾಣೆಯ ಅಂಕಿ ಅಂಶಗಳ ಸಲುವಾಗಿ ಆರೋಪಿ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಕಾರಟಗಿ.
(ಸಂಚಾರಿ ನ್ಯಾಯಾಲಯ ಕಾರಟಗಿ)